# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 926 |
| ಸದಸ್ಯರ ಹೆಸರು | : | ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17-12-2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸರ್ಕಾರವು ಮೈಸೂರು ಮಹಾನಗರ ಪಾಲಿಕೆಗೆ 2023 ರಿಂದ 2024ನೇ ಸಾಲಿನವರೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ನೀಡಿರುವ ಅನುದಾನಗಳು ಎಷ್ಟು; (ವಾರ್ಡ್‌ವಾರು ಪೂರ್ಣ ಮಾಹಿತಿ ನೀಡುವುದು)</td><td>

**ಎಸ್.ಎಫ್.ಸಿ ಯೋಜನೆ:**

• ರಾಜ್ಯ ಸರ್ಕಾರವು ಮೈಸೂರು ಮಹಾನಗರ ಪಾಲಿಕೆಗೆ 2023 ರಿಂದ 2024ನೇ ಸಾಲಿನವರೆಗೆ ಎಸ್.ಎಫ್.ಸಿ. ಮುಕ್ತನಿಧಿ, ಎಸ್.ಎಫ್.ಸಿ. ಕುಡಿಯುವ ನೀರು ಹಾಗೂ ಎಸ್.ಎಫ್.ಸಿ. ವಿಶೇಷ ಅನುದಾನ ಯೋಜನೆಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನೀಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.

**1. ಎಸ್.ಎಫ್.ಸಿ. ಮುಕ್ತನಿಧಿ**

(ರೂ.ಲಕ್ಷಗಳಲ್ಲಿ)

<table>
<tr><th>ಕ್ರ. ಸಂ</th><th>ವರ್ಷ</th><th>ಹಂಚಿಕೆ ಮೊತ್ತ</th><th>ಬಿಡುಗಡೆ</th><th>ವೆಚ್ಚ</th></tr>
<tr><td>1</td><td>2023-24</td><td>2495.00</td><td>2495.00</td><td>1940.78</td></tr>
<tr><td>2</td><td>2024-25</td><td>2034.00</td><td>1017.00</td><td>301.14</td></tr>
<tr><td></td><td>ಒಟ್ಟು</td><td>4529.00</td><td>3512.00</td><td>2241.92</td></tr>
</table>

**2. ಎಸ್.ಎಫ್.ಸಿ. ಕುಡಿಯುವ ನೀರು**

(ರೂ.ಲಕ್ಷಗಳಲ್ಲಿ)

<table>
<tr><th>ಕ್ರ. ಸಂ</th><th>ವರ್ಷ</th><th>ಹಂಚಿಕೆ ಮೊತ್ತ</th><th>ಬಿಡುಗಡೆ</th><th>ವೆಚ್ಚ</th></tr>
<tr><td>1</td><td>2023-24</td><td>9.04</td><td>9.04</td><td>0.00</td></tr>
<tr><td>2</td><td>2024-25</td><td>2.5</td><td>2.5</td><td>0.00</td></tr>
<tr><td></td><td>ಒಟ್ಟು</td><td>11.54</td><td>11.54</td><td>0.00</td></tr>
</table>

**3. ಎಸ್.ಎಫ್.ಸಿ. ವಿಶೇಷ ಅನುದಾನ**

(ರೂ.ಲಕ್ಷಗಳಲ್ಲಿ)

<table>
<tr><th>ಕ್ರ. ಸಂ</th><th>ವರ್ಷ</th><th>ಹಂಚಿಕೆ ಮೊತ್ತ</th><th>ಬಿಡುಗಡೆ</th><th>ವೆಚ್ಚ</th></tr>
<tr><td>1</td><td>2023-24</td><td>4500.00</td><td>1850.00</td><td>1665.81</td></tr>
<tr><td>2</td><td>2024-25</td><td>0.00</td><td>0.00</td><td>0.00</td></tr>
<tr><td></td><td>ಒಟ್ಟು</td><td>4500.00</td><td>1850.00</td><td>1665.81</td></tr>
</table>

**ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ (ಹಂತ-1):**

• ಸದರಿ ಯೋಜನೆಯಡಿ ಹಿಂದಿನ ಸಾಲಿನಲ್ಲಿ ಬಾಕಿಯಿದ್ದ ಬಿಡುಗಡೆ ಮೊತ್ತದಲ್ಲಿ ರೂ.1156.09 ಲಕ್ಷಗಳನ್ನು 2023-24ನೇ ಸಾಲಿನಲ್ಲಿ ಬಳಕೆ ಮಾಡಲಾಗಿರುತ್ತದೆ.

</td></tr>
<tr><td>ಆ)</td><td>ಮೈಸೂರು ಮಹಾನಗರವು ಹೆಚ್ಚಿನ ವೇಗದಲ್ಲಿ ಬೆಳೆಯುತ್ತಿರುವುದರಿಂದ ಜನಸಂಖ್ಯೆ ದಿನೇ ದಿನೇ ಹೆಚ್ಚಳವಾಗುತ್ತಿರುವುದರಿಂದ ಇವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಇನ್ನೂ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಯಾವ ಕ್ರಮಗಳನ್ನು ಕೈಗೊಂಡಿದೆ?</td><td>

**ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (ಹಂತ-02 )ಕುರಿತಂತೆ**

• ಸರ್ಕಾರದ ಆದೇಶ ಸಂಖ್ಯೆ: ನಅಇ 140 ಎಸ್.ಎಫ್.ಸಿ 2024 (1), ದಿನಾಂಕ:10-07-2024 ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ ಮೈಸೂರು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (ಹಂತ-02) ಯನ್ನು 2024-25 ರಿಂದ 2026-27 ರವರೆಗೆ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮೊತ್ತ ರೂ.250.00 ಕೋಟಿಗಳ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 140 ಎಸ್.ಎಫ್.ಸಿ 2024, ದಿನಾಂಕ:18-10-2024 ರಲ್ಲಿ ಹಂಚಿಕೆ ಮಾಡಲಾಗಿದೆ ಹಾಗೂ ಕ್ರಿಯಾ ಯೋಜನೆಯ ಅನುಮೋದನೆಯ ಹಂತದಲ್ಲಿದೆ.

</td></tr>
</table>

**15ನೇ ಹಣಕಾಸು ಆಯೋಗ ಅನುದಾನದಡಿ:**

2024-25ನೇ ಸಾಲಿನ ಮೊದಲನೇ ಮತ್ತು ಎರಡನೇ ಕಂತಿನ ಅನುದಾನ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ನಂತರ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುವುದು.

**ಎಸ್.ಎಫ್.ಸಿ. ಯೋಜನೆ:**

- ಮೈಸೂರು ಮಹಾನಗರವು ಹೆಚ್ಚಿನ ವೇಗದಲ್ಲಿ ಬೆಳೆಯುತ್ತಿರುವುದರಿಂದ ಜನಸಂಖ್ಯೆ ದಿನೇ ದಿನೇ ಹೆಚ್ಚಳವಾಗುತ್ತಿರುವುದರಿಂದ ಇವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರವು ಈ ಕೆಳಕಂಡ ಎಸ್ .ಎಫ್.ಸಿ. ಯೋಜನೆಗಳಡಿಯಲ್ಲಿ ಮಾರ್ಗಸೂಚಿಗಳನ್ವಯ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

- **ಎಸ್.ಎಫ್.ಸಿ ಮುಕ್ತ ನಿಧಿ ಅನುದಾನ:** ಈ ಅನುದಾನವನ್ನು 4ನೇ ರಾಜ್ಯ ಹಣಕಾಸು ಆಯೋಗವು ನೀಡಿರುವ ಶಿಫಾರಸ್ಸುಗಳನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ, ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತದೆ.

| | | |
|---|---|---|
| ಜನಸಂಖ್ಯೆ | – | 40% |
| ಭೌಗೋಳಿಕ ವಿಸ್ತೀರ್ಣ | – | 20% |
| ಪ.ಜಾತಿ/ಪ.ಪಂಗಡ ಜನಸಂಖ್ಯೆ | – | 20% |
| ಅನಕ್ಷರಸ್ಥರು | - | 20% |
| **ಒಟ್ಟು** | - | 100% |

- ಪ್ರತಿ ವರ್ಷ ಆಯವ್ಯಯದಲ್ಲಿ **ಎಸ್.ಎಫ್.ಸಿ. ಮುಕ್ತನಿಧಿ** ಯೋಜನೆಯ ಬಂಡವಾಳ ಆಸ್ತಿಗಳ ಸೃಜನೆ, ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ. ಉಪಘಟಕ ಯೋಜನೆಗಳಡಿಯಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತದೆ.

  1. **ಎಸ್.ಎಫ್.ಸಿ ಕುಡಿಯುವ ನೀರು ಅನುದಾನ:** ಈ ಅನುದಾನವನ್ನು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಎಸ್.ಎಫ್.ಸಿ ಪ್ರವೇಶ ತೆರಿಗೆ ಅವತರಣದಡಿ ಅನುದಾನವನ್ನು ಪ್ರತಿ ವರ್ಷ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತಿದೆ.

  2. **ಎಸ್.ಎಫ್.ಸಿ ವಿಶೇಷ ಅನುದಾನ:** ಈ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳ ವಿವೇಚನಾನುಸಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುತ್ತದೆ.

ಸಂಖ್ಯೆ:ನಅಇ 412 ಎಸ್ಎಫ್ಸಿ 2024

**(ಬಿ.ಎಸ್ ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.